# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್. ರಸ್ತೆ, ತುಮಕೂರು-572 103

ಸಂಖ್ಯೆ:ತುವಿ:ಅ.ವಿ.:ಸ್ಕೌಟ್ಸ್&ಗೈಡ್ಸ್-11150:2023-24 |2370 ದಿನಾಂಕ:30.09.2023

## : ಸುತ್ತೋಲೆ :

ವಿಷಯ : ದಿನಾಂಕ:04.10.2023 ರಂದು ಆಯೋಜಿಸಿರುವ ರೋವರ್ಸ್-ರೇಂಜರ್ಸ್ ಮಾಹಿತಿ ಕಾರ್ಯಾಗಾರದಲ್ಲಿ ಭಾಗವಹಿಸುವ ಕುರಿತು.

ಉಲ್ಲೇಖ: 1. ಜಿಲ್ಲಾ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕ, ತುಮಕೂರು ಇವರ ಮನವಿ ಪತ್ರ ದಿನಾಂಕ:29.09.2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:30.09.2023

* * * * *

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆ ವತಿಯಿಂದ ಪದವಿ ಕಾಲೇಜುಗಳಲ್ಲಿನ ಉಪನ್ಯಾಸಕ/ಉಪನ್ಯಾಸಕಿಯರಿಗೆ ಬೆಂಗಳೂರು ವಿಭಾಗ ಮಟ್ಟದ ಒಂದು ದಿನದ ಮಾಹಿತಿ ಕಾರ್ಯಾಗಾರವನ್ನು ದಿನಾಂಕ:04.10.2023 ರ ಬುಧವಾರ ದಂದು ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಸಭಾಂಗಣ, ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ರಾಜ್ಯ ಕೇಂದ್ರ ಕಚೇರಿ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು- 560 001 ಇಲ್ಲಿ ಬೆಳಗ್ಗೆ 9.30 ಗಂಟೆಗೆ ಆಯೋಜಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸದರಿ ಕಾರ್ಯಾಗಾ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಸರ್ಕಾರಿ, ಅನುದಾನಿತ, ಅನುದಾನ ರಹಿತ ಕಾಲೇಜುನಿಂದ ಒಬ್ಬ ಪುರುಷ ಮತ್ತು ಒಬ್ಬ ಮಹಿಳಾ ಉಪನ್ಯಾಸಕರನ್ನು ನಿಯೋಜಿಸಲು ಹಾಗೂ ಶಿಬಿರದಲ್ಲಿ ಭಾಗವಹಿಸುವ ಉಪನ್ಯಾಸಕರು ಸದರಿ ಶಿಬಿರದ ನೋಂದಣಿ 156/- ರೂ., ಘಟಕಗಳ ನೋಂದಣಿ ಶುಲ್ಕ ಪ್ರತಿ ವಿಭಾಗಕ್ಕೆ 194/- ರೂ. ಮತ್ತು ಸ್ಕೌಟ್ಸ್ ಗೈಡ್ಸ್ ಮಾಸ ಪತ್ರಿಕೆಯ ವಾರ್ಷಿಕ ಶುಲ್ಕ 100/- ನ್ನು ಒಟ್ಟು 450/- ರೂ. ಗಳನ್ನು ಹಾಗೂ ಶಿಬಿರಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ನಿಧಿಯಿಂದ ಭರಿಸಿಕೊಳ್ಳುವಂತೆ ತಿಳಿಸಲಾಗಿದೆ.

ಆದೇಶದ ಮೇರೆಗೆ

ಕರಡು ಪ್ರತಿ ಮಾನ್ಯ ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ.

Mangalakshmi M

ಉಪಕುಲಸಚಿವರು
(ಸಾಮಾನ್ಯ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು

1. ಸಂಯೋಜಕರು, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ

ಸಿಆರ್

# The Bharat Scouts And Guides

**Tumkur District Association, Kanteerava Scouts Guides Bhavan, Gandhi Nagar, Tumkur.**

## ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ, ತುಮಕೂರು.

ಕಂಠೀರವ ಸೌಟ್ಸ್ ಗೈಡ್ಸ್ ಭವನ, ಗಾಂಧಿನಗರ, ತುಮಕೂರು-572102. ದೂರವಾಣಿ : 0816-2254050

**District Minister**
Patron.

**Deputy Commissioner**
President.

**Asha Prasanna Kumar**
District Chief Commissioner.

**B.R. Venugopala Krishna**
District Commissioner (S).

**Shubhashini R. Kumar**
District Commissioner (G).

**Surendra Shah**
District Secretary

Ref. : BSG/DHQ/ 67 2023-24 Date 29/09/2023

ರವರಿಗೆ
ಮಾನ್ಯ ಸಚಿವರು
ತುಮಕೂರು ವಿಶ್ವವಿದ್ಯಾಲಯ
ತುಮಕೂರು.

ಮಾನ್ಯರೆ,

ವಿಷಯ-ತುಮಕೂರು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತಹ ಎಲ್ಲಾ ಪದವಿ ಕಾಲೇಜುಗಳಲ್ಲಿನ ಉಪನ್ಯಾಸಕರನ್ನು ಒಂದು ದಿನದ ರೋವರ್ಸ್-ರೇಂಜರ್ಸ್ ಮಾಹಿತಿ ಕಾರ್ಯಾಗಾರ ಶಿಬಿರಕ್ಕೆ ನಿಯೋಜಿಸುವ ಬಗ್ಗೆ.

ಉಲ್ಲೇಖ:- ಕಾಶಿಇ:ಶೈವಿ:218:ಸ್ಕೌಟ್ಸ್&ಗೈಡ್ಸ್/2020-21(ಭಾಗ-2) ದಿನಾಂಕ:25.09.2023.

ಮೇಲ್ಕಂಡ ವಿಷಯದನ್ವಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ ರಾಜ್ಯ ಸಂಸ್ಥೆಯು ಪದವಿ ಕಾಲೇಜುಗಳಲ್ಲಿನ ಉಪನ್ಯಾಸಕ/ಉಪನ್ಯಾಸಕಿಯರಿಗೆ ಬೆಂಗಳೂರು ವಿಭಾಗ ಮಟ್ಟದ ಒಂದು ದಿನದ ಮಾಹಿತಿ ಕಾರ್ಯಾಗಾರವನ್ನು **ದಿನಾಂಕ:-04.10.2023 ರ ಬುಧವಾರ** ರಂದು ಕೂಡಜ್ಜಿ ಬಸಪ್ಪ ಸ್ಕೌಟ್ಸ್ ಸಭಾಂಗಣ ಭಾರತ್ ಸ್ಕೌಟ್ಸ್-ಗೈಡ್ಸ್ ಕರ್ನಾಟಕ ರಾಜ್ಯ ಕೇಂದ್ರ ಕಛೇರಿ #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು-560001. ಇಲ್ಲಿ **ಬೆಳಿಗ್ಗೆ-9.30** ಗಂಟೆಗೆ ಆಯೋಜಿಸಿದ್ದು, ಈ ಶಿಬಿರಕ್ಕೆ ಈಗಾಗಲೇ ತರಬೇತಿ ಪಡೆದಿರುವ ಉಪನ್ಯಾಸಕರನ್ನು ಕಡ್ಡಾಯವಾಗಿ ನಿಯೋಜಿಸುವುದು, ಹಾಗೂ ತರಬೇತಿ ಪಡೆಯದೆ ಇರುವಂತಹ ಸರ್ಕಾರಿ ಅನುದಾನಿತ ಅನುದಾನ; ರಹಿತ ಕಾಲೇಜುಗಳಿಂದ ಪ್ರತಿ ಕಾಲೇಜಿನಿಂದ ಒಬ್ಬ ಪುರುಷ & ಒಬ್ಬ ಮಹಿಳಾ ಉಪನ್ಯಾಸಕರನ್ನು ನಿಯೋಜಿಸಲು ಕೋರಿದೆ.ಹಾಗೂ ಶಿಬಿರದಲ್ಲಿ ಭಾಗವಹಿಸುವ ಉಪನ್ಯಾಸಕರು ಸದರಿ ಶಿಬಿರದ ನೋಂದಣಿ 156/- ರೂ, ಘಟಕಗಳ ನೋಂದಣಿ ಶುಲ್ಕ ಪತ್ರಿ ವಿಭಾಗಕ್ಕೆ 194/- ರೂ, ಮತ್ತು ಸ್ಕೌಟ್ಸ್ ಗೈಡ್ಸ್ ಮಾಸ ಪತ್ರಿಕೆಯ ವಾರ್ಷಿಕ ಶುಲ್ಕ 100/- ರೂ ನ್ನು ಒಟ್ಟು-450/- ರೂಗಳನ್ನು ಪತ್ರಿಯೊಬ್ಬರು ಶಿಬಿರಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ನಿಧಿಯಿಂದ ಭರಿಸಲು ಆದೇಶಿಸಬೇಕಾಗಿ ವಿನಂತಿ.

ಇಲಾಖೆಯ ಆದೇಶ ಪ್ರತಿಯನ್ನು ಲಗತ್ತಿಸಿದೆ.

ಸ್ಕೌಟ್‌ಗೈಡ್ ವಂದನೆಗಳೊಂದಿಗೆ

Ashaprasannakumar
ಜಿಲ್ಲಾ ಮುಖ್ಯ ಆಯುಕ್ತರು

P.G.R. SINDHIA, B.E. (Civil)
STATE CHIEF COMMISSIONER
Former Minister for Health, Finance,
Home, Industries & Transport
Government of Karnataka

State Headquarters
No. 39, "Shanthigruha"
Palace Road
Bengaluru-560 001

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

THE BHARAT SCOUTS & GUIDES, KARNATAKA

Ref : BSG/SHQ/ 1494 / 2023-24

Date : 29.09.2023

ಮಾನ್ಯರೆ,

ವಿಷಯ:-2023-24ನೇ ಸಾಲಿನಲ್ಲಿ ಪದವಿ ಕಾಲೇಜುಗಳ ಉಪನ್ಯಾಸಕ ಮತ್ತು ಉಪನ್ಯಾಸಕಿಯರುಗಳಿಗೆ 2023ರ ಅಕ್ಟೋಬರ್ ಮಾಹೆಗಳಲ್ಲಿ ಆಯೋಜಿಸುವ ಒಂದು ದಿನದ ರೋವರಿಂಗ್-ರೇಂಜರಿಂಗ್ ಮಾಹಿತಿ ಶಿಬಿರಕ್ಕೆ ತಮ್ಮ ವ್ಯಾಪ್ತಿಯ ಜಿಲ್ಲೆಗಳ ಪದವಿ ಕಾಲೇಜುಗಳಿಂದ ಉಪನ್ಯಾಸಕ ಮತ್ತು ಉಪನ್ಯಾಸಕಿಯರುಗಳನ್ನು ನಿಯೋಜಿಸಲು ಕೋರಿ

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ರಾಜ್ಯದ ಪ್ರತಿಯೊಂದು ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಕಾಲೇಜುಗಳ ಉಪನ್ಯಾಸಕ ಮತ್ತು ಉಪನ್ಯಾಸಕಿಯರುಗಳಿಗೆ ರೋವರಿಂಗ್-ರೇಂಜರಿಂಗ್ ಪಠ್ಯಕ್ರಮದ ಕುರಿತು ಒಂದು ದಿನದ ಮಾಹಿತಿ ಶಿಬಿರವನ್ನು ಆಯೋಜಿಸಲಾಗಿದೆ. ಬೆಂಗಳೂರು ವಿಭಾಗದ ಮಾಹಿತಿ ಶಿಬಿರವನ್ನು **ದಿನಾಂಕ:04.10.2023ರಂದು ಬೆಳಗ್ಗೆ 9.00 ಗಂಟೆಗೆ, "ಕೊಂಡಜ್ಜಿ ಬಸಪ್ಪ ಸ್ಕೌಟ್ ಗೈಡ್ ಸಮುದಾಯ ಭವನ", # 39, ಶಾಂತಿಗೃಹ, ಅರಮನೆ ರಸ್ತೆ, (ಮಹಾರಾಣಿ ವಿಜ್ಞಾನ ಕಾಲೇಜು ಪಕ್ಕ), ಬೆಂಗಳೂರು-01** ಇಲ್ಲಿ ಆಯೋಜಿಸಲಾಗಿದೆ.

ಆದುದರಿಂದ ತಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಕಾಲೇಜುಗಳಿಂದ ಕಡ್ಡಾಯವಾಗಿ ರೋವರ್ ವಿಭಾಗಕ್ಕೆ ಒಬ್ಬ ಪುರುಷ ಉಪನ್ಯಾಸಕರನ್ನು, ರೇಂಜರ್ ವಿಭಾಗಕ್ಕೆ ಒಬ್ಬರು ಮಹಿಳಾ ಉಪನ್ಯಾಸಕಿಯರನ್ನು ಹಾಗೂ ಈಗಾಗಲೇ ತರಬೇತಿ ಹೊಂದಿದ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳನ್ನು ರೋವರ್ಸ್-ರೇಂಜರ್ಸ್ ಮಾಹಿತಿ ಶಿಬಿರಕ್ಕೆ ನಿಯೋಜಿಸಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಭಾಗವಹಿಸುವ ಪ್ರತಿಯೊಬ್ಬ ಉಪನ್ಯಾಸಕ-ಉಪನ್ಯಾಸಕಿಯರು ಪ್ರತ್ಯೇಕವಾಗಿ ಶಿಬಿರದ ನೊಂದಣಿ ಶುಲ್ಕ ರೂ.156/-ಗಳನ್ನು ಕಾಲೇಜುಗಳ ರೋವರ್-ರೇಂಜರ್ ಘಟಕಗಳ ನೊಂದಣಿ ಶುಲ್ಕ ರೂ.194/-, ಸ್ಕೌಟ್-ಗೈಡ್ ಮಾಸಪತ್ರಿಕೆ ವಾರ್ಷಿಕ ಶುಲ್ಕ ರೂ.100/- ಒಟ್ಟು ರೂ.450/-ಗಳನ್ನು ತರಬೇತಿಗೆ ಹಾಜರಾದ ಸಂದರ್ಭದಲ್ಲಿ ಪಾವತಿಸಬೇಕಾಗಿರುತ್ತದೆ. ರೂ.450/-ಗಳನ್ನು ಹಾಗೂ ಹೋಗಿ-ಬರುವ ಪ್ರಯಾಣವ ವೆಚ್ಚನ್ನು ಉಲ್ಲೇಖಿತ ಅಧಿಕೃತ ಜ್ಞಾಪನ ದಿನಾಂಕ:25.09.2023ರನ್ವಯ ಆಯಾ ಕಾಲೇಜುಗಳ ರೋವರ್-ರೇಂಜರ್ ನಿಧಿಯಿಂದ ಭರಿಸಲು ಮತ್ತು ಸದರಿ ದಿನದ ಗೈರುಹಾಜರಿಯನ್ನು ಅನ್ಯಕಾರ್ಯನಿಮಿತ್ತವೆಂದು ಪರಿಗಣಿಸಲು ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಮತ್ತು ತಾವು ಈ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸ ಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತೇವೆ.

ಸ್ಕೌಟ್ ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್.ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಮಾನ್ಯ ಕುಲಸಚಿವರು
ತುಮಕೂರು ವಿಶ್ವವಿದ್ಯಾಲಯ
ತುಮಕೂರು.

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560 001.
ದಿನಾಂಕ: 25.09.2023.

ಸಂಖ್ಯೆ: ಕಾಶಿಇ:ಶೈವಿ:218:ಸ್ಕೌಟ್ಸ್ & ಗೈಡ್ಸ್/2020-21 (ಭಾಗ-2)

**ಅಧಿಕೃತ ಜ್ಞಾಪನ**

ವಿಷಯ: 2023-24ನೇ ಸಾಲಿನಲ್ಲಿ ಪದವಿ ಕಾಲೇಜುಗಳ ಉಪನ್ಯಾಸಕ / ಉಪನ್ಯಾಸಕಿಯರುಗಳಿಗೆ ಅಕ್ಟೋಬರ್ / ನವೆಂಬರ್ 2023 ಮಾಹೆಗಳಲ್ಲಿ ಒಂದು ದಿನದ ರೋವರಿಂಗ್ – ರೇಂಜರಿಂಗ್ ಮಾಹಿತಿ ಶಿಬಿರಕ್ಕೆ ದಿನಾಂಕವನ್ನು ನಿಗಧಿಪಡಿಸಿ ಸಂಘಟಿಸುವ ಬಗ್ಗೆ, ಅನುಮತಿಯ ಆದೇಶ ನೀಡಲು ಮನವಿ ಕುರಿತು.

ಉಲ್ಲೇಖ: ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಪತ್ರ ಸಂಖ್ಯೆ: ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/408/2023-24 dt:16.09.2023.

********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ರಾಜ್ಯದ ಪ್ರತಿಯೊಂದು ಸರ್ಕಾರಿ, ಅನುದಾನಿತ ಪದವಿ ಕಾಲೇಜುಗಳ ಉಪನ್ಯಾಸಕ ಮತ್ತು ಉಪನ್ಯಾಸಕಿಯರುಗಳಿಗೆ ರೋವರಿಂಗ್ – ರೇಂಜರಿಂಗ್ ಶಿಕ್ಷಣದ ಬಗ್ಗೆ ಒಂದು ದಿನದ ಮಾಹಿತಿ ಶಿಬಿರವನ್ನು ದಿನಾಂಕ:15.10.2023 ಒಳಗೆ ಮೊದಲನೆಯ ಹಂತದಲ್ಲಿ ಈ ಕೆಳಕಂಡ ಪ್ರಾದೇಶಿಕ ಕಛೇರಿ ವ್ಯಾಪ್ತಿಯಲ್ಲಿ ಬರುವ ಪದವಿ ಕಾಲೇಜುಗಳ ಉಪನ್ಯಾಸಕರುಗಳಿಗೆ ಆಯೋಜಿಸಲಾಗಿದ್ದು, ಈ ಒಂದು ದಿನದ ಮಾಹಿತಿ ಶಿಬಿರದಲ್ಲಿ ರಾಜ್ಯದ ಸ್ಕೌಟಿಂಗ್ – ಗೈಡಿಂಗ್‌ನಲ್ಲಿ ನುರಿತ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಲಾಗಿರುತ್ತದೆ.

| ವಿಭಾಗ | ದಿನಾಂಕ | ಸ್ಥಳ |
|---|---|---|
| ಬೆಂಗಳೂರು | 04.10.2023<br>ಬೆಳಿಗ್ಗೆ 9.00 ಗಂಟೆಗೆ | ಕೊಂಡಜ್ಜಿ ಬಸಪ್ಪ ಸ್ಕೌಟ್ ಗೈಡ್, ಸಮುದಾಯ ಭವನ ಶಾಂತಿಗೃಹ, ಬೆಂಗಳೂರು. |
| ಮಂಗಳೂರು | 06.10.2023<br>ಬೆಳಿಗ್ಗೆ 9.00 ಗಂಟೆಗೆ | ಜಿಲ್ಲಾ ಸ್ಕೌಟ್ ಭವನ, ಲಾಲ್‌ಬಾಗ್, ಮಂಗಳೂರು. |
| ಮೈಸೂರು | 09.10.2023<br>ಬೆಳಿಗ್ಗೆ 9.00 ಗಂಟೆಗೆ | ಜಯಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್ ಭವನ, ಮೈಸೂರು. |
| ಶಿವಮೊಗ್ಗ | 12.10.2023<br>ಬೆಳಿಗ್ಗೆ 9.00 ಗಂಟೆಗೆ | ಜಿಲ್ಲಾ ಸ್ಕೌಟ್ ಭವನ, ಬಿ.ಹೆಚ್.ರಸ್ತೆ, ಶಿವಮೊಗ್ಗ. |

ಮುಂದುವರೆದು, ಈ ಒಂದು ದಿನದ ಮಾಹಿತಿ ಶಿಬಿರಕ್ಕೆ ತಮ್ಮ ವ್ಯಾಪ್ತಿಯ ಯಾವ ಕಾಲೇಜುಗಳಲ್ಲಿ ತರಬೇತಿಯನ್ನು ಹೊಂದಿದ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಉಪನ್ಯಾಸಕ / ಉಪನ್ಯಾಸಕಿಯರನ್ನು ಮತ್ತು ಇದುವರೆವಿಗೂ ಹೊಂದದೆ ಇರುವಂತಹ ಕಾಲೇಜುಗಳಿಂದ ರೋವರ್ ವಿಭಾಗಕ್ಕೆ ಒಬ್ಬ ಪುರುಷ ಉಪನ್ಯಾಸಕರನ್ನು, ರೇಂಜರ್ ವಿಭಾಗಕ್ಕೆ ಒಬ್ಬರು ಮಹಿಳಾ ಉಪನ್ಯಾಸಕಿಯರನ್ನು ತರಬೇತಿಗೆ ಕಡ್ಡಾಯವಾಗಿ ನಿಯೋಜಿಸಲು ಪ್ರಾಂಶುಪಾಲರುಗಳು ಕ್ರಮವಹಿಸುವುದು.

ಸದರಿ ಶಿಬಿರದಲ್ಲಿ ಭಾಗವಹಿಸುವ ಉಪನ್ಯಾಸಕರುಗಳಿಗೆ ಊಟೋಪಚಾರದ ವ್ಯವಸ್ಥೆ, ಖರ್ಚು ಸೇರಿದಂತೆ ಶಿಬಿರದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಉಪನ್ಯಾಸಕ – ಉಪನ್ಯಾಸಕಿಯರು ಪಾವತಿಸಬೇಕಾಗಿರುವ ಒಟ್ಟು ಶುಲ್ಕದ ವಿವರ ಕೆಳಕಂಡಂತಿದೆ:

ಶಿಬಿರದ ನೋಂದಣಿ ಶುಲ್ಕ : ರೂ.156/-

ರೋವರ್-ರೇಂಜರ್ ಘಟಕಗಳ ನೋಂದಣಿ ಶುಲ್ಕ : ರೂ.194/-

ಸ್ಕೌಟ್-ಗೈಡ್ ಮಾಸಪತ್ರಿಕೆ ವಾರ್ಷಿಕ ಶುಲ್ಕ : ರೂ.100/-

ಒಟ್ಟು : ರೂ.450/-

ಒಟ್ಟು ರೂ.450/-ಗಳನ್ನು ಅಭ್ಯರ್ಥಿಗಳು ತರಬೇತಿಗೆ ಹಾಜರಾಗುವ ಸಂದರ್ಭದಲ್ಲಿ ಪಾವತಿಸಬೇಕಾಗಿರುತ್ತದೆ. ಈ ಅಭ್ಯರ್ಥಿಗಳು ಶಿಬಿರಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚದೊಂದಿಗೆ ಮೇಲ್ಕಂಡ ರೂ.450/- ವೆಚ್ಚವನ್ನು ಪದವಿ ಕಾಲೇಜುಗಳ ಸ್ಕೌಟ್ಸ್ & ಗೈಡ್ಸ್ / ರೋವರ್-ರೇಂಜರ್ ನಿಧಿಯಿಂದ ಭರಿಸಲು ಮತ್ತು ಸದರಿ ದಿನದ ಗೈರು ಹಾಜರಿಯನ್ನು ಅನ್ಯ ಕಾರ್ಯ ನಿಮಿತ್ತ ಎಂದು ಪರಿಗಣಿಸಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸದರಿ ತರಬೇತಿಯಲ್ಲಿ ಭಾಗವಹಿಸುವ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಯ ಹಿಂದಿನ ದಿನವೇ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

ಪ್ರತಿಯನ್ನು:

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು.
2. ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.
3. ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯಾಡಳಿತಾಧಿಕಾರಿಗಳು, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
4. ಶ್ರೀ ಆರ್.ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
5. ಕಛೇರಿ ಪ್ರತಿ.

ರೋವರಿಂಗ್ ಮತ್ತು ರೇಂಜರಿಂಗ್ ನಲ್ಲಿ ತರಬೇತಿ ಪಡೆದ ಪ್ರಥಮ ದರ್ಜೆ ಕಾಲೇಜುಗಳ ಉಪನ್ಯಾಸಕರ ಪಟ್ಟಿ.

| ಕ್ರ ಸಂ | ಉಪನ್ಯಾಸಕರ ಹೆಸರು | ವಿಭಾಗ | ಕಾಲೇಜು ವಿಳಾಸ |
|---|---|---|---|
| 01 | ಮಂಜುನಾಥ ಸ್ವಾಮಿ | ರೋವರ್ ಸ್ಕೌ ಲೀ. | ಪಲ್ಲಾಗಟ್ಟೆಅಡವಪ್ಪ ಪದವಿ ಕಾಲೇಜುತಿಪಟೂರು |
| 02 | ರೇಣುಕಾ ಪ್ರಸಾದ್ | ರೋವರ್ ಸ್ಕೌ ಲೀ. | ಜಿ ಎಫ್ ಜಿ ಸಿ ತಿಪಟೂರು |
| 03 | ಮಲ್ಲೇಶಪ್ಪ | ರೋವರ್ ಸ್ಕೌ ಲೀ. | ಜಿ ಎಫ್ ಜಿ ಸಿ ತುಮಕೂರು |
| 04 | ಶ್ರೀನಿವಾಸ್ | ರೋವರ್ ಸ್ಕೌ ಲೀ. | ಜಿ ಎಫ್ ಜಿ ಸಿ ತುಮಕೂರು |
| 05 | ಡಾ ಗೋವಿಂದರಾಜು | ರೋವರ್ ಸ್ಕೌ ಲೀ | ಜಿ ಎಫ್ ಜಿ ಸಿ ಹೆಬ್ಬೂರು |
| 06 | ಸ್ಮಿತಾ | ರೇಂಜರ್ ಲೀಡರ್ | ಜಿ ಎಫ್ ಜಿ ಸಿ ಮಹಿಳಾ ಕಾಲೇಜು ತುಮಕೂರು. |
| 07 | ಶಿವಕುಮಾರ್ | ರೋವರ್ ಸ್ಕೌ ಲೀ. | ಜಿ ಎಫ್ ಜಿ ಸಿ ಗುಬ್ಬಿ |
| 08 | ರಾಧ | ರೇಂಜರ್ ಲೀಡರ್ | ಜಿ ಎಫ್ ಜಿ ಸಿ ಹೆಬ್ಬೂರು |
| 09 | ವಿಜಯಾಕುಮಾರಿ | ರೇಂಜರ್ ಲೀಡರ್ | ಪಲ್ಲಾಗಟ್ಟೆ ಅಡವಪ್ಪ ಪದವಿ ಕಾಲೇಜುತಿಪಟೂರು |
| 10 | ರಂಗಧಾಮಯ್ಯ | ರೋವರ್ ಸ್ಕೌ ಲೀ. | ಜಿ ಎಫ್ ಜಿ ಸಿ, ಸಿ ಎಸ್ ಪುರ. |
| 11 | ಸೋಮಶೇಖರ್ | ರೋವರ್ ಸ್ಕೌ ಲೀ. | ಕಲ್ಪತರು ವಿಜ್ಞಾನ ಕಾಲೇಜು ತಿಪಟೂರು. |
| 12 | ನಟರಾಜ್ | ರೋವರ್ ಸ್ಕೌ ಲೀ. | ವಿಶ್ವವಿದ್ಯಾಲಯ ವಿಜ್ಞಾನ ಕಾಲೇಜು ತುಮಕೂರು |
| 13 | ಪರಿಣಿತ | ರೇಂಜರ್ ಲೀಡರ್ | ವಿಶ್ವವಿದ್ಯಾಲಯ ವಿಜ್ಞಾನ ಕಾಲೇಜು ತುಮಕೂರು |
| 14 | ಶ್ರೀನಿವಾಸಮೂರ್ತಿ | ರೋವರ್ ಸ್ಕೌ ಲೀ | ಶ್ರೀ ಸಿದ್ದಾರ್ಥ ಕಾಲೇಜು ತುಮಕೂರು |
| 15 | ನಾಗರಾಜ್ | ರೋವರ್ ಸ್ಕೌ ಲೀ. | ಜಿ ಎಫ್ ಜಿ ಸಿ ಚಿಕ್ಕನಾಯಕನಹಳ್ಳಿ |
| 16 | ಶ್ರೀನಿವಾಸ ಪ್ರಭು | ರೋವರ್ ಸ್ಕೌ ಲೀ | ಜಿ ಎಫ್ ಜಿ ಸಿ ಕುಣಿಗಲ್ |
| 17 | ವಿಜಯಕುಮಾರಿ | .ರೇಂಜರ್ ಲೀಡರ್ | ಪಲ್ಲಾಗಟ್ಟೆಅಡವಪ್ಪ ಪದವಿ ಕಾಲೇಜುತಿಪಟೂರು |
| 18 | ಮಂಜುನಾಥ | ರೋವರ್ ಸ್ಕೌ ಲೀ. | ಜಿ ಎಫ್ ಜಿ ಸಿ ಹುಳಿಯಾರ್ |
| 19 | ಯೋಗೀಶ್ | ರೋವರ್ ಸ್ಕೌ ಲೀ. | ಜಿ ಎಫ್ ಜಿ ಸಿ ಹುಳಿಯಾರ್ |
| 20 | ನಾಗೇಂದ್ರಪ್ಪ | ರೋವರ್ ಸ್ಕೌ ಲೀ | ಜಿ ಎಫ್ ಜಿ ಸಿ ತಿಪಟೂರು |
| | | | |